ಕಾರ್ಯ ಪ್ರಗತಿಯಲ್ಲಿದೆ. ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಕಾಮಗಾರಿಯ ಅಂದಾಜುಗಳನ್ನು ಪ್ರಾಧಿಕಾರಕ್ಕೆ ಸಲ್ಲಿಸಬೇಕಾಗಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅಂದಾಜು ಠೇವಣಿ ಮಾಡಲು ಸಿದ್ಧವಿದೆ. ಇನ್ನು ಮುಂದೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಿರ್ಮಿಸುವ ಬಡಾವಣೆಗಳಿಗೆ ಮೂಲ ಭೂತ ಸೌಕರ್ಯಗಳನ್ನು ಒದಗಿಸಲು ಬಡಾವಣೆ ನಿರ್ಮಿಸುವ ಸಮಯದಲ್ಲೇ ಕ್ರಮ ತೆಗೆದುಕೊಳ್ಳಲು ಪ್ರಯತ್ನಿಸಲಾಗುವುದು.

ಈ) ಸರ್ಕಾರ ಸಾರ್ವಜನಿಕರ ನಿವೇಶನಗಳನ್ನು ಹಸ ಬಡಾವಣೆಗಳನ್ನು ಸಿದ್ಧಪಡಿಸುತ್ತಿರುವ ಯೋಜನೆಗಳು ಯಾವುವು?

ಸರ್ಕಾರವು ನಾಡಪ್ರಭು ಕೆಂಪೆಗೌಡ ಬಡಾವಣೆಯನ್ನು ರಚಿಸಲು ಅನುಮೋದನೆ ನೀಡಿದ್ದು, ಈ ಬಡಾವಣೆ ರಚಿಸಲು ಜಮೀನುಗಳನ್ನು ಸ್ವಾದೀನಪಡಿಸಿಕೊಳ್ಳಲು ಪ್ರಾರಂಭಿಕ ಅಧಿಸೂಚನೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಹೊರಡಿಸುತ್ತದೆ.ಈ ಕೆಳಕಂಡ 4 ಬಡಾವಣೆಗಳನ್ನು ರಚಿಸಲು ಯೋಜಿಸಲಾಗಿದೆ.

1. ಶಿವರಾಮ ಕಾರಮತ ಬಡಾವಣೆ.
2. ಡಿ.ದೇವರಾಜ ಅರಸು ಬಡಾವಣೆ
3. ಕೆ.ಸಿ.ರೆಡ್ಡಿ ಬಡಾವಣೆ,
4. ಎಸ್.ನಿಜಲಿಂಗಪ್ಪ ಬಡಾವಣೆ.

<u>ಕರ್ನಾಟಕ ವಿಧಾನ ಸಭೆ</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ	:	**(314)229**
ಸದಸ್ಯರ ಹೆಸರು	:	**ಶ್ರೀ ಹ್ಯಾರಿಸ್ ಎನ್.ಎ.**
ಉತ್ತರಿಸುವ ಸಚಿವರು	:	**(ಶ್ರೀ ಬಿ.ಎಸ್.ಯಡಿಯೂರಪ್ಪ)**
	:	**ಮಾನ್ಯ ಮುಖ್ಯಮಂತ್ರಿಗಳು**

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಜಾರಿಯಲ್ಲಿರುವ ಸ್ವಯಂ ಮೌಲ್ಯಮಾಪನ ಆಸ್ತಿ ತೆರಿಗೆ ಪದ್ಧತಿಯನ್ನು ಮುಂದುವರಿಸುವುದೇ ಇಲ್ಲವಾದಲ್ಲಿ ಕಾರಣಗಳು ಮತ್ತು ಪರ್ಯಾಯ ಪದ್ಧತಿಯ ವಿವರಗಳೇನು

ದಿನಾಂಕ 1.4.2008ರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸಿ.ವಿ.ಎಸ್.ತೆರಿಗೆ ಪದ್ಧತಿಯನ್ನು ಜಾರಿಗೆ ತರಲು ಉದ್ದೇಶಿಸಲಾಗಿತ್ತು. ಈ ಹಂತದಲ್ಲಿ ಸಾರ್ವಜನಿಕರಿಂದ ಸದರಿ ಪದ್ಧತಿಗೆ ವ್ಯಾಪಕ ವಿರೋಧ ವ್ಯಕ್ತವಾದ ಹಿನ್ನಲೆಯಲ್ಲಿ ರಾಷ್ಟ್ರಪತಿಗಳ ಆಡಳಿತದಲ್ಲಿ ತಾತ್ಕಾಲಿಕವಾಗಿ ನೂತನ ಚುನಾಯಿತ ಸರ್ಕಾರ ರಚನೆಯಾಗುವವರೆಗೆ ಮುಂದೂಡಲು ನಿರ್ಣಯಿಸಲಾಗಿತ್ತು. ಈ ಮಧ್ಯಂತರ ಅವಧಿಯಲ್ಲಿ ನಿಯಮಕ್ಕೆ ತಿದ್ದುಪಡಿ ತರದೇ ಯಾವುದೇ ರೀತಿಯ ಆಸ್ತಿ

ತೆರಿಗೆಯನ್ನು ಸಂಗ್ರಹಿಸಲು ಉದ್ಭವಿಸಿದ ಆಡಳಿತಾತ್ಮಕ ತೊಂದರೆಗಳ ಹಿನ್ನಲೆಯಲ್ಲಿ ಹಾಗೂ ಆಸ್ತಿ ತೆರಿಗೆಯನ್ನು ವಾರ್ಷಿಕ ಬಾಡಿಗೆ ಆಧಾರದ ಮೇಲೆ ಸಂಗ್ರಹಿಸಿದ ಬಗ್ಗೆ ಉಚ್ಚ ನ್ಯಾಯಾಲಯದ ಮುಂದೆ ರಿಟ್ ಅರ್ಜಿಗಳು ಸಲ್ಲಿಸಿದ ಹಿನ್ನಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಯಾವುದೇ ತೆರಿಗೆಯನ್ನು ಸಂಗ್ರಹಿಸಿರುವುದಿಲ್ಲ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಆಸ್ತಿ ತೆರಿಗೆಯನ್ನು ಯಾವ ಪದ್ಧತಿಯಡಿಯಲ್ಲಿ ಸಂಗ್ರಹಿಸಬೇಕೆಂಬ ಬಗ್ಗೆ ಪರಿಶೀಲಿಸಲು ಸಚಿವ ಸಂಪುಟದ ಉಪಸಮಿತಿಯೊಂದನ್ನು ರಚಿಸಲಾಗಿದೆ. ಸದರಿ ಸಮಿತಿಯು ಈ ವಿಷಯದ ಬಗ್ಗೆ ಈಗಾಗಲೇ ಚರ್ಚಿಸಿದ್ದು, ಒಂದು ಅಂತಿಮ ನಿರ್ಣಯವನ್ನು ಶೀಘ್ರದಲ್ಲಿಯೇ ತೆಗೆದುಕೊಳ್ಳಲಿದೆ.

ಆ) ಕಳೆದ ಎರಡು ವರ್ಷಗಳಲ್ಲಿ ಪಾಲಿಕೆಯು ಸಂಗ್ರಹಿಸಿದ ಮನೆ ಕಂದಾಯದ ಒಟ್ಟು ಮೊತ್ತ ಎಷ್ಟು;

2006–07 – ರೂ. 347.25 ಕೋಟಿಗಳು

2007–08 – ರೂ. 448.73 ಕೋಟಿಗಳು

ಇ) ಮಹಾನಗರ ವ್ಯಾಪ್ತಿಯ ಎಲ್ಲಾ ಮನೆಯೊಡೆಯರು ಕಂದಾಯ ವ್ಯಾಪ್ತಿಗೆ ಒಳಪಟ್ಟಿರುತ್ತಾರೆಯೇ, ಇಲ್ಲವಾದಲ್ಲಿ ಅದರ ಪ್ರಮಾಣವೇನು;

ಈ) ಪೂರ್ಣ ಪ್ರಮಾಣದಲ್ಲಿ ಎಲ್ಲಾ ಆಸ್ತಿ–ಮನೆಗಳನ್ನು ಕಂದಾಯಕ್ಕೊಳಪಡಿಸುವ ಮೂಲಕ ಕಂದಾಯದ ಮೊತ್ತವನ್ನು ಹೆಚ್ಚಿಸುವಲ್ಲಿ ಸರ್ಕಾರದ ಕ್ರಮಗಳೇನು;

ಬೆಂಗಳೂರು ಮಹಾನಗರ ಪಾಲಿಕೆಯ ಹಳೆಯ 100 ವಾರ್ಡಗಳ ಪ್ರದೇಶದಲ್ಲಿ ಸುಮಾರು 6,60.000 ಸ್ವತ್ತುಗಳನ್ನು ಕಂದಾಯಕ್ಕೆ ಒಳಪಡಿಸಿದ್ದು, ಇನ್ನು ಸುಮಾರು 35,000 ರಿಂದ 40,000 ಸ್ವತ್ತುಗಳು ಕಂದಾಯಕ್ಕೆ ಒಳಪಡಬೇಕಾಗಿದೆ. ಈ ಸ್ವತ್ತುಗಳು ಬಹುತೇಕ ರೆವಿನ್ಯೂ ನಿವೇಶನಗಳಾಗಿರುತ್ತವೆ. ಇತ್ತೀಚೆಗೆ ರೆವಿನ್ಯೂ ನಿವೇಶನಗಳನ್ನು ನೊಂದಾಯಿಸಲು ಪ್ರತಿಬಂಧ ಹಾಕಿರುವುದರಿಂದ ಅಂತಹ ನಿವೇಶನದಾರರು / ನಿವೇಶನಗಳ ಮಾಲೀಕರಾಗಿಲ್ಲವಾದ್ದರಿಂದ ಹಾಗೂ ಸಕ್ರಮ ಯೋಜನೆ ಇತ್ಯರ್ಥವಾದ ನಂತರ ಎಲ್ಲಾ ಮನೆಯೊಡೆಯರನ್ನು ಕಂದಾಯ ವ್ಯಾಪ್ತಿಗೆ ಒಳಪಡಿಸಲು ಸಾಧ್ಯವಾಗುತ್ತದೆ ಮಹಾನಗರ ಪಾಲಿಕೆ ರಚನೆಗೊಂಡಿದ್ದು, ಇದರಲ್ಲಿ 7 ಸಿಎಂಸಿ ಮತ್ತು 1 ಟಿಎಂಸಿ ಹಾಗೂ 110 ಗ್ರಾಮ ಪ್ರದೇಶದಲ್ಲಿ ಇದುವರೆವಿಗೂ ಒಟ್ಟು 2,50.000 ಸ್ವತ್ತುಗಳನ್ನು ಕಂದಾಯಕ್ಕೆ ಒಳಪಡಿಸಿದ್ದು, ಇನ್ನು 4,00.000 ಮೀರಿದ ಸ್ವತ್ತುಗಳು ಕಂದಾಯಕ್ಕೆ ಒಳಪಡದೆ ಇರುತ್ತದೆ.

ಉ) ಉಪಗ್ರಹದ ಚಿತ್ರದ ಮೂಲಕ ಬಿಬಿಎಂಪಿ ವ್ಯಾಪ್ತಿಗೆ ಬರುವ ಎಲ್ಲಾ ಆಸ್ತಿಗಳ ವಿವರ ಪಡೆದುಕೊಳ್ಳುವ ತಂತ್ರಜ್ಞಾನ ಆಧಾರಿತ ಕ್ರಮಗಳನ್ನು ಅಳವಡಿಸಿಕೊಳ್ಳಲು ಸರ್ಕಾರ ಕ್ರಮ ಜರುಗಿಸುವುದೇ?

ಪಾಲಿಕೆಯ ಹಳೆಯ 100 ವಾರ್ಡ್‌ಗಳ ಪೈಕಿ ಈಗಾಗಲೇ 29 ವಾರ್ಡ್‌ಗಳಲ್ಲಿ ಜಿಐಎಸ್ ಮೂಲಕ ಎಲ್ಲಾ ಸ್ವತ್ತುಗಳ ವಿವರಗಳನ್ನು ಪಡೆಯಲು ಕ್ರಮ ಕೈಗೊಳ್ಳಲಾಗಿದೆ. ಉಳಿದ ವಾರ್ಡ್‌ಗಳಲ್ಲೂ ಕೂಡ ಇದೇ ರೀತಿ ಕ್ರಮ ಕೈಗೊಳ್ಳಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ : (132)230
ಸದಸ್ಯರ ಹೆಸರು : ಶ್ರೀ ಜಯಚಂದ್ರ ಟಿ.ಬಿ(ಪಿರಾ)
ಉತ್ತರಿಸುವ ಸಚಿವರು : (ಶ್ರೀ ಬಿ.ಎಸ್.ಯಡಿಯೂರಪ್ಪ
: ಮಾನ್ಯ ಮುಖ್ಯಮಂತ್ರಿಗಳು

ಅ. ರಾಜ್ಯದಲ್ಲಿ ಕಲ್ಲುಗಣಿಗುತ್ತಿಗೆಗಳನ್ನು ಈ ಹಿಂದೆ ಸರ್ಕಾರಿ ಗೋಮಾಳ ಜಮೀನಿನಲ್ಲಿ ನೀಡಿದ್ದು, ನಂತರ ಸರ್ಕಾರವು ಗೋಮಾಳದ ಜಮೀನಿನಲ್ಲಿ ಕಲ್ಲುಗುಣಿಗುತ್ತಿಗೆಯನ್ನು ನಿಷೇಧಿಸಿ, ಸರ್ಕಾರಿ ಆದೇಶವನ್ನು ಹೊರಡಿಸಿದ ನಂತರವೂ ಗಣಿಗಾರಿಕೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು. ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಸುತ್ತೋಲೆ ಸಂಖ್ಯೆ: RD 83 LGP 2006, ದಿನಾಂಕ 05–01–2007 ರಲ್ಲಿ ಗೋಮಾಳ ಪ್ರದೇಶದಲ್ಲಿ ಕಲ್ಲುಗಣಿ ಗುತ್ತಿಗೆ ಮಂಜೂರಾತಿಗೆ ನಿರ್ಬಂಧವಿರುತ್ತದೆ. ಅಂತೆಯೇ, ಸದರಿ ಸುತ್ತೋಲೆಯ ದಿನಾಂಕದಿಂದ ರಾಜ್ಯದಲ್ಲಿನ ಗೋಮಾಳ ಪ್ರದೇಶಗಳಲ್ಲಿ ಹೊಸದಾಗಿ ಕಲ್ಲುಗಣಿಗುತ್ತಿಗೆಗಳ ಮಂಜೂರಾತಿ/ನವೀಕರಣವನ್ನು ಮಾಡಿರುವುದಿಲ್ಲ. ಆದರೆ, ದಿನಾಂಕ 05–01–2007 ರ ಪೂರ್ವದಲ್ಲಿ ಮಂಜೂರು ಮಾಡಿರುವ / ನವೀಕರಿಸಲ್ಪಟ್ಟಿರುವ ಕಲ್ಲುಗುಣಿಗುತ್ತಿಗೆಗಳು ಅವಧಿ ಮುಕ್ತಾಯದವರೆಗೆ ಚಾಲ್ತಿಯಲ್ಲಿರುತ್ತವೆ.

ಮಾನ್ಯ ಉಚ್ಚ ನ್ಯಾಯಾಲಯವು W.P.No.15882/07ರಲ್ಲಿ ದಿನಾಂಕ 15–02–2008 ರಂದು ನೀಡಿರುವ ತೀರ್ಪಿನಲ್ಲಿ, ದಿನಾಂಕ: 05–01–2007 ರ ಸುತ್ತೋಲೆಯನ್ನು ರದ್ದುಪಡಿಸಿದ್ದು, ದಿನಾಂಕ:24–02–1999 ರ ಸುತ್ತೋಲೆಯಲ್ಲಿನ ಮಾರ್ಗಸೂಚಿಗಳ್ವನಯ, 3 ತಿಂಗಳೊಳಗಾಗಿ ಗೋಮಾಳ ಪ್ರದೇಶಗಳಲ್ಲಿ ಹೊಸದಾಗಿ ಕಲ್ಲುಗುಣಿ ಗುತ್ತಿಗೆ ಮಂಜೂರು ಮಾಡುವ / ಚಾಲ್ತಿಯಲ್ಲಿರುವ ಗುತ್ತಿಗೆಗಳನ್ನು ನವೀಕರಿಸುವ ಬಗ್ಗೆ ಕ್ರಮವಹಿಸುವಂತೆ ಆದೇಶಿಸಿದೆ. ದಿನಾಂಕ:15–02–2008 ರ ತೀರ್ಪಿನನ್ವಯ ಬಾಕಿ ಪ್ರಸ್ತಾವನೆಗಳ ವಿಲೇವಾರಿ ಕುರಿತು ನಿಯಮಾನುಸಾರ ಕ್ರಮವಹಿಸುವಂತೆ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರಿಗೆ ಸೂಚಿಸಿದೆ. ದಿನಾಂಕ:15–02–2008ರ ತೀರ್ಪಿನ ವಿರುದ್ಧ ಕಂದಾಯ ಇಲಾಖೆಯು ಮೇಲ್ಮನವಿಯನ್ನು ಸಲ್ಲಿಸಿದ್ದು, ಇತ್ಯರ್ಥವಾಗಬೇಕಿದೆ.

ಆ. ಹಾಗಿದ್ದಲ್ಲಿ, ಸದರಿ ಮಾಹಿತಿಯನ್ನು ಒದಗಿಸುವುದು;